ಮಹಾವೀರ ಕಾಸರ, ಶಿವಮೊಗ್ಗ

ಕೈದಿಗಳಿಗೆ ಓದಲು ಪುಸ್ತಕಗಳನ್ನು ಕೊಟ್ಟರೆ ತಪ್ಪೇನು?



ಓಡಲಿಕ್ಕೂ ಅವಕಾಶಗಳನ್ನು ಕೊಡುವಾಗ ಓದಲು ಕೊಟ್ಟರೆ ಏನೇನೂ ತಪ್ಪಿಲ್ಲ.

ಮೈಸೂರು ಕುಸುಮ, ಶ್ರವಣಬೆಳಗೊಳ

ಚಿತ್ರಗಳು ಓಡದೆ ಥಿಯೇಟರ್ ಮುಚ್ಚುವ ಪರಿಸ್ಥಿತಿ ಇದ್ದರೂ ನಾಯಕಿ ನಾಯಕರಿಗೆ ಅಷ್ಟೊಂದು ಪ್ರಾಶಸ್ತ್ಯವಿದೆಯಲ್ಲ?

ಸರಿಯೇ. ಅವರು ಚಿತ್ರೋದ್ಯಮದ ಅಮಾವಾಸ್ಯೆಯಲ್ಲೂ ಮಿನುಗುವ ತಾರೆಗಳು.

ಎಂ.ಸಿ. ಧನ್ಯತಾ, ಬೆಂಗಳೂರು

ನಿಜವಾದ 'ಮೇಷ್ಟ್ರು' ಎಂದರೆ ಯಾರು?

ಅರಿಯಿಂದಲೂ ಅರಿತು ಅರಿಯದವರಿಗೆ ಅರುಹಲು ಅನುವಾದವನು.

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ

ವಯಸ್ಸಾದಂತೆ ನಾವು ಮೌನಿಗಳಾಗುತ್ತೇವೆ. ಕಾರಣವೇನು?



ಇಯರ್ ಫೋನ್ ಹಾಕಿಕೊಂಡಿರುವ ಸುತ್ತಲಿನವರಿಗೆ ಡಿಸ್ಟರ್ಬ್ ಆಗದಿರಲೆಂದು.

ಕೆ.ವಿ. ಗೋವಿಂದಾಚಾರಿ, ಮೈಸೂರು

ದೇಗುಲದ ವಿಗ್ರಹ, ಪ್ರತಿಮೆಗಳನ್ನು ಪುರುಷರೇ ನಿರ್ಮಿಸುತ್ತಾರೆ. ಹೆಣ್ಣು ಶಿಲ್ಪಿಗಳೇಕಿಲ್ಲ?

ಹೆಣ್ಣು ಕಾಣುತ್ತಲೇ ಶಿಲ್ಪಿ ಹೊಡೆದು ಕೃತಿಗೆ ಭಂಗ ತರುವ ಮಂದಿಯೇ ಕಾರಣವಂತೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಜೀವನ ಎಂಬುದು ಕಾಮನ ಬಿಲ್ಲೇ?

ಊಹೂ. ಕಾಮನ್ ಬಿಲ್ಲು ಪ್ಲಸ್ ಜಿಎಸ್‌ಟಿ ಪ್ಲಸ್ ಲಂಚ.

ಬಿ. ಚಂದ್ರೇಗೌಡ, ಬೆಂಗಳೂರು

ದನಕ್ಕೂ, ಸದನಕ್ಕೂ ಏನು ವ್ಯತ್ಯಾಸ?

ಇದು ಜಾನುವಾರು; ಅದು ಜಾತಿwarಉ.

ಟಿ.ಎಚ್.ಎಂ. ಶೇಖರಯ್ಯ, ಗೆದ್ದಲಗಟ್ಟೆ

ವೈರಾಗ್ಯದ ಪಾಠ ಮಾಡುತ್ತಿದ್ದವರು ಈಗ ವೈಭೋಗದ ಆಟ ಆಡುತ್ತಿರುವರಲ್ಲ?

ಆ ಪಾಠಕ್ಕೆ ದುಬಾರಿ ಫೀಸ್ ಇಟ್ಟಿದ್ದೇ ಈ ಆಟ ಆಡಲಂತೆ.

ವಾಸಣ್ಣ, ಧಾರವಾಡ

ಅಂತ್ಯಸಂಸ್ಕಾರಕ್ಕೂ ಲಂಚವಂತೆ. ಈ ಲಂಚದ ಅಂತ್ಯ ಸಂಸ್ಕಾರ ಎಂದು?

ಕಡೆಯ ಲಂಚಗುಳಿಯ ಅಂತ್ಯಸಂಸ್ಕಾರ ಆದಂದು.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಹೊಗಳಿ ಹೊಗಳಿ ಅಟ್ಟಕ್ಕೇರಿಸಿದರು. ತೆಗಳಿ ತೆಗಳಿ?

ಚಟ್ಟಕ್ಕೇರಿಸಿದರು.

ಜಗದೀಶ ಬಿ. ಹೊಸೂರು, ಮೈಸೂರು

ಭೂಲೋಕದಿಂದ ಹೊರಟ ಮನುಷ್ಯ ಸ್ವರ್ಗದ ದಾರಿ ಪತ್ತೆ ಹಚ್ಚುವುದು ಹೇಗೆ?

ಅವನೇನೂ ಪತ್ತೆ ಹಚ್ಚಬೇಕಿಲ್ಲ. ಇಲ್ಲಿ ಟಿಕೆಟ್ ತೆಗೆದುಕೊಂಡಾಕ್ಷಣ 'ಪುಣ್ಯ' ಫ್ಲೈಟ್ ಅಲ್ಲಿಗೇ ಒಯ್ಯುತ್ತದೆ.

ಮಲ್ಲಿಕಾರ್ಜುನ, ಸುರಧೇನುಪುರ

ಕಾಯಕವೇ ಕೈಲಾಸ. ವೈಕುಂಠ?

ಸಮಾರಾಧನೆ!

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಪುರಾಣಕ್ಕೂ, ಇತಿಹಾಸಕ್ಕೂ ಇರುವ ವ್ಯತ್ಯಾಸವೇನು?

ಕಥೆ ಅದೇ; ಮಠದಲ್ಲಿ ಹೇಳಿದರೆ ಪುರಾಣ; ಯೂನಿವರ್ಸಿಟಿಯಲ್ಲಿ ಹೇಳಿದರೆ ಇತಿಹಾಸ.

ಮೃತ್ಯುಂಜಯ ಎ, ಪಾಂಡವಪುರ

ದೇವರು, ದೆವ್ವ ಕಲ್ಪನೆಯೋ, ನೈಜವೋ?

ಭೀತಿನೀತಿಗಳಿಂದ ಸಮಾಜವನ್ನು ಸರಿದಾರಿಯಲ್ಲಿಡಲು ಅವಶ್ಯವಾದ ಅಮೋಘ ಕಲ್ಪನೆ.

## ಬಹುಮಾನಿತ ಪ್ರಶ್ನೆ

ರಾಜೀವ್ ಎನ್. ಮಾಗಲ್, ಸಕಲೇಶಪುರ

ಭಗವಂತನಿಗೆ ಎ.ಐ. ತಂತ್ರಜ್ಞಾನದಲ್ಲಿ ಪೂಜೆ ಮಾಡಿದರೆ ಯಾವ ರೀತಿಯ ವರ ಸಿಗಬಹುದು?

ವರ್ಚುವಲ್ ರಿಯಾಲಿಟಿಯ ತರಹದ್ದು.

ಪಿ.ಜೆ. ರಾಘವೇಂದ್ರ, ಮೈಸೂರು

ಗುರುವಾರ ಬೆಳಗ್ಗೆ ಪ್ರಶ್ನೆಗಳ ಸಂಖ್ಯೆ ಹೆಚ್ಚಾಗುವುದೇಕೆ?

ಡೆಮಾನ್‌ಸ್ಟ್ರೇಷನ್ ಎಫೆಕ್ಟ್. ಆ ಗುರುವಾರದ ಉತ್ತರಗಳು ಮುಂದಿನ ವಾರದ ಪ್ರಶ್ನೆಗಳಿಗೆ ಪ್ರಚೋದಕ.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಯಾವುದೇ ಸಾಹಿತ್ಯ ಕಾರ್ಯಕ್ರಮದಲ್ಲೂ ಯುವಜನತೆ ಭಾಗಿಯಾಗುವುದೇ ಇಲ್ಲ. ಏಕೆ?

ಎಐ ಬಳಸಿ ಪುರಾಣ ಹೇಳಿದರೂ ಬಂದಾರು. ನಾವು ಅವರ ಮನದ ಜಾಡು ಹಿಡಿದಿಲ್ಲ.

ಬಿ. ಬಸವರಾಜ್, ಹರಿಹರ

ಹೆಣ್ಣು ಭೂಮಿ ತೂಕದವಳಾದರೆ ಗಂಡು?



ಅಪ್ಪಚ್ಚಿ!

ಕೆ.ವಿ. ಗೋವಿಂದಾಚಾರ್ಯ

'ಮನುಷ್ಯ ಜನ್ಮ ಶ್ರೇಷ್ಠ' ಎನ್ನುವರು. ಹಾಗಿದ್ದರೂ ಸತ್ತ ನಂತರ ಭೂತ, ಪ್ರೇತ ಆಗುತ್ತಾರೆ ಎನ್ನುತ್ತಾರಲ್ಲ?

'ಮನುಷ್ಯರಾಗಿದ್ದಾಗಲೂ ಒಳಗೊಳಗೆ ಹೀಗೇ ಇದ್ದೆವು' ಎಂದು ತೋರಿಸಿಕೊಳ್ಳಲಂತೆ!

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಮಾನವನಿಗೂ, ಮಾಧವನಿಗೂ ಸಂಬಂಧ ಉಂಟೆ?

ಮಾನವನ ಹೈ ಡೆಫಿನೆಷನ್ ಮಾಡೆಲ್ಲೇ ಮಾಧವ.

■ ರಾಮ್